ದಿನಾಂಕ 12-09-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಡಿ ಕೆ ಜೆ ವಕೀಲರಿಂದ.

ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿ. ನೀವು ನಿಮ್ಮ ವಾದ ಪತ್ರದಲ್ಲಿ ಉದ್ದೇಶಪೂರ್ಕವಾಗಿ ದಾವಾ ಆಸ್ತಿ ಹೇಗೆ ಪ್ರಾಪ್ತಿ ಆಗಿರುತ್ತದೆ ಎಂದು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿಯು ಸಾಮೂಹಿಕವಾಗಿ ಖರೀದಿ ಮಾಡಿದ್ದೇವೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಸಾಮೂಹಿಕವಾಗಿ ಖರೀದಿ ಮಾಡಿದ್ದೇವೆ ಎಂಬ ವಿಚಾರವನ್ನು ಸಹ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ವಾದಿಯ ತಮ್ಮ ಆಗಿದ್ದರಿಂದ ಆತನ ಹೆಸರಲ್ಲಿ ಖರೀದಿ ಮಾಡಲಾಗಿದೆ ಎನ್ನುತ್ತಾರೆ.

ದಿನಾಂಕ 29-05-1986 ರಂದು ದಾವಾ ಆಸ್ತಿಯ ಕಂದಾಯ ದಾಖಲೆಗೆ ವಾದಿಯ ಹೆಸರು ಪ್ರತಿವಾದಿಗೆ ಗೊತ್ತಿಲ್ಲದಂತೆ ದಾಖಲಾಗಿರುತ್ತದೆ ಹಾಗೂ ಪ್ರತಿವಾದಿ ಯಾವತ್ತೂ ಸಹ ವಾದಿಯ ಹೆಸರನ್ನು ದಾಖಲಿಸಲು ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 29-05-1986 ರಂದು ನೀಡಿದ್ದೇವೆ ಎಂದು ಹೇಳುವ ವರದಿಯಲ್ಲಿ ಇರುವ ಸಹಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ದಿನಾಂಕ 29-05-1986 ರಂದೆ ವರದಿ ನೀಡಲಾಗಿದೆ, ಪ್ರತಿವಾದಿಗೆ ಅದೇ ದಿನ ನೊಟೀಸ ನೀಡಲಾಗಿದೆ ಹಾಗೂ ಅದೇ ದಿನ ವಾದಿಯ ಹೆಸರು ದಾವಾ ಆಸ್ತಿಗೆ ದಾಖಲಾಗಲು ಆದೇಶ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎನ್ನುತ್ತಾರೆ. ದಾವಾ ಆಸ್ತಿಯ ದಾಖಲೆಗೆ ವಾದಿಯ ಹೆಸರು ದಿನಾಂಕ 29-05-1986 ರಂದೆ ದಾಖಲೆ ಆಗಿದೆ ಎಂದರೆ ಸಾಕ್ಷಿಯು ಆಗ ತಾನು ಚಿಕ್ಕವನು ಇದ್ದೆ ಎನ್ನುತ್ತಾರೆ. ಸಾಕ್ಷಿಗೆ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ಸಹಿಯನ್ನು ತೋರಿಸಿ ಸದರಿ ಸಹಿ ಪ್ರತಿವಾದಿಯ ಸಹಿ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿರುವ ಪ್ರತಿವಾದಿಯ ಸಹಿ ಹಾಗೂ ನಿಪಿ 4 ರಲ್ಲಿ ಇದೆ ಎಂದು ಹೇಳುವ ಪ್ರತಿವಾದಿಯ ಸಹಿ ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿ ಅನಕ್ಷರಸ್ಥ ಆಗಿದ್ದರಿಂದ ನಾನು ಮತ್ತು ವಾದಿಯ ಮಿಲಾಪಿಯಾಗಿ ವಾದಿಯ ಹೆಸರನ್ನು ಸಿಟಿ ಸರ್ವೇ ದಾಖಲೆಗಳಲ್ಲಿ ಖೊಟ್ಟಿಯಾಗಿ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಿಟಿ ಸರ್ವೇ ನಂಬರ 2773/1 ಹಾಗೂ 2773/2 ಎಂದು ಇಲ್ಲಿಯವರೆಗೂ ವಿಭಜನೆ ಆಗಿಲ್ಲ ಹಾಗೂ ಇಂದಿಗೂ ಸಹ ದಾವಾ ಆಸ್ತಿಯ ಸಿ ಟಿ ಎಸ್ ನಂಬರ 2773 ಆಗಿರುತ್ತದೆ ಎಂದರೆ ಸರಿ.

ಪುರಸಭೆಯವರು ಕಂದಾಯ ಕಟ್ಟಿಸಿಕೊಳ್ಳುವಾಗ ಆಸ್ತಿಗೆ ಪ್ರತ್ಯೇಕ ನಂಬರ ನೀಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ಪುರಸಭೆಯವರು ಯಾವ ನಂಬರ ನೀಡಿದ್ದಾರೆ ಎಂದರೆ ಸಾಕ್ಷಿಯು

ವಾದಿಗೆ ಸಂಬಂಧಿಸಿದ ಆಸ್ತಿಗೆ ಬಿ643 ಹಾಗೂ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಗೆ ಬಿ642 ಎಂದು ನೀಡಿದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಗೆ ಪುರಸಭೆ ಹಳಿಯಾಳ ರವರು ಬಿ643 ಎಂಬ ಒಂದೇ ನಂಬರ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಮಿಲಾಪಿಯಾಗಿ ಪುರಸಭೆ ದಾಖಲೆಯಲ್ಲಿ ನನ್ನ ತಂದೆಯ ಹೆಸರಲ್ಲಿ ಬಿ642 ಎಂದು ಖೊಟ್ಟಿ ನಂಬರ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸೇರಿ ಪುರಸಭೆ ಹಳಿಯಾಳ ರವರ ಜೊತೆ ಮಿಲಾಪಿಯಾಗಿ ಪುರಸಭೆ ದಾಖಲೆಗಳಲ್ಲಿ ವೈಟ್ ನರ್ ಹಚ್ಚಿ ನನ್ನ ತಂದೆಯ ಹೆಸರಿಗೆ ಬಿ642 ಎಂದು ದಾಖಲಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯ ಹೆಸರು ಪುರಸಭೆ ದಾಖಲೆಯಲ್ಲಿ ಯಾವ ಆಧಾರದ ಮೇಲೆ ದಾಖಲಾಯಿತು ಎಂದರೆ ಸಾಕ್ಷಿಯು 1986 ರಲ್ಲಿ ದಾಖಲಾಗಿರುತ್ತದೆ ಎನ್ನುತ್ತಾರೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಿ ಸದರಿ ದಾಖಲೆಯು ದಾವಾ ಆಸ್ತಿಯ ಪುರಸಭೆ ಟ್ಯಾಕ್ಸ್ ರಜಿಸ್ಟರ ಎಂದು ಸೂಚಿಸಲಾಗಿ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಪ್ರತಿವಾದಿಯ ಹೆಸರನ್ನು ವೈಟ್ ನರ್ ಮೂಲಕ ತಿದ್ದಿ ವಾದಿಯ ಹೆಸರನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 7 ಅನ್ನು ತೋರಿಸಿ ಸದರಿ ದಾಖಲೆಯಲ್ಲಿ ನಿಮ್ಮ ತಂದೆಯ ಹೆಸರಿಗೆ ಪುರಸಭೆ ಆಸ್ತಿ ಸಂಖ್ಯೆ ಬಿ642 ಎಂದು ತೋರಿಸಿದ್ದಾರೆ ಎಂದರೆ ಸಾಕ್ಷಿ ಸದರಿ ದಾಖಲೆ ಖೊಟ್ಟಿ ದಾಖಲೆ ಎನ್ನುತ್ತಾರೆ.

**<u>ನ್ಯಾಯಾಲಯದ ಟಿಪ್ಪಣಿ ಃ</u>** ಈಗ ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.

ದಿನಾಂಕ 12-09-2024 ರಂದು ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಡಿ ಕೆ ಜೆ ವಕೀಲರಿಂದ.

ಪುರಸಭೆ ಆಸ್ತಿ ಸಂಖ್ಯೆ ಬಿ642 ಪ್ರತಿವಾದಿಗೆ ಸಂಬಂಧಿಸಿದ್ದು ಇರುತ್ತದೆ ಹಾಗೂ ಪುರಸಭೆ ಆಸ್ತಿ ಸಂಖ್ಯೆ ಬಿ643 ವಾದಿಗೆ ಸಂಬಂಧಿಸಿದ್ದು ಇರುತ್ತದೆ. ನಿಪಿ 14 ಅನ್ನು ನಾನೇ ಹಾಜರುಪಡಿಸಿರುತ್ತೇನೆ ಹಾಗೂ ಸದರಿ ದಾಖಲೆಯಲ್ಲಿ ಪುರಸಭೆ ಆಸ್ತಿ ಸಂಖ್ಯೆ ಬಿ373 ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಪುರಸಭೆಯ ಆಸ್ತಿಗಳ ಸಂಖ್ಯೆ ಬದಲಾವಣೆ ಆಗುತ್ತಾ ಇರುತ್ತದೆ ಎನ್ನುತ್ತಾರೆ. ನಿಪಿ 13 ರಂತೆ ಇರುವ ದಾಖಲೆಯು ನಾನು ವಿದ್ಯುತ್ ಶಕ್ತಿ ಪಡೆಯಲು ಪುರಸಭೆ ಹಳಿಯಾಳ ರವರಿಂದ ಪಡೆದ ನಿರಾಕ್ಷೇಪಣಾ ಪತ್ರ ಆಗಿರುತ್ತದೆ ಎಂದರೆ ಸರಿ. ನಿಪಿ 13 ರಲ್ಲಿ ಮನೆ ನಂಬರ ಬಿ373 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ 13 ಮತ್ತು 14 ರ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿ ಸಂಖ್ಯೆ ಬಿ643 ಆಗಿದ್ದರೆ ನಿಪಿ 13 ಮತ್ತು 14 ರಲ್ಲಿ ಬಿ373 ಎಂದು ಏಕೆ ತೋರಿಸಿದ್ದಾರೆ ಎಂದರೆ ಸಾಕ್ಷಿಯು ಪುರಸಭೆ ಆಸ್ತಿ ಸಂಖ್ಯೆಗಳು ಕಾಲಾನುಕ್ರಮೇಣ ಬದಲಾವಣೆ ಆಗುತ್ತಾ ಬರುತ್ತವೆ ಎನ್ನುತ್ತಾರೆ.

ಯಾಲ್ಲಾಪುರ ರೋಡ್ ಹಾಗೂ ಖಾಜಿಗಲ್ಲಿ ಮತ್ತು ಚರ್ಚ ರೋಡ್ ಆಜು ಬಾಜು ಇವೆ ಎಂದರೆ ಸರಿಯಲ್ಲ. ನಿಮಗೆ ಸೇರಿದ ಒಟ್ಟು 6 ಆಸ್ತಿಗಳು ಇವೆ ಎಂದರೆ ಸಾಕ್ಷಿಯು ತನಗೆ 3 ಆಸ್ತಿಗಳು ಇವೆ ಎನ್ನುತ್ತಾರೆ. ಆಸ್ತಿ ಸಂಖ್ಯೆ ಬಿ373 ದಾವಾ ಆಸ್ತಿಗೆ ಸಂಬಂಧ ಪಡದೇ ಇದ್ದರೂ ನ್ಯಾಯಾಲಯಕ್ಕೆ ತಪ್ಪು ಕಲ್ಪನೆ ಮೂಡಿಸಲು ಸದರಿ ಆಸ್ತಿಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪುರಸಭೆ ಆಸ್ತಿ ಸಂಖ್ಯೆ ಬಿ373 ಹಾಗೂ ದಾವಾ ಆಸ್ತಿ ಸಂಖ್ಯೆ ಬಿ643 ಬೇರೆ ಬೇರೆ ಆಸ್ತಿಗಳು ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿ ದಿನಾಂಕ 16-03-2022 ರಂದು ಸಲ್ಲಿಸಿದ್ದಾನೆ ಎಂದರೆ ಸರಿ. ಈ ದಾವೆ ಸಲ್ಲಿಸಿದ ನಂತರ ಅಂದರೆ ದಿನಾಂಕ 29-03-2022 ರಂದು ವಾದಿಯು ಕೆ ಇ ಬಿ ಇಲಾಖೆಗೆ ಅರ್ಜಿ ಸಲ್ಲಿಸಿ ಆಸ್ತಿ ಸಂಖ್ಯೆ ಬಿ373 ಅನ್ನು ಆಸ್ತಿ ಸಂಖ್ಯೆ ಬಿ643 ಎಂದು ಬದಲಾಯಿಸಿ ಎಂದು ಕೇಳಿಕೊಂಡಿದ್ದನು ಎಂದರೆ ಸರಿ. ಮೇಲಿನಂತೆ ಕೆ ಇ ಬಿ ಇಲಾಖೆಗೆ ವಾದಿಯು ಅರ್ಜಿ ಸಲ್ಲಿಸಿದ ನಂತರ ವಾದಿಯು ಪುರಸಭೆ ಹಳಿಯಾಳ ರವರಿಂದ ಕೆ ಇ ಬಿ ಇಲಾಖೆಗೆ ಆಸ್ತಿ ಸಂಖ್ಯೆ ಬಿ373 ಇದು ಆಸ್ತಿ ಸಂಖ್ಯೆ ಬಿ643 ಮತ್ತು ಬಿ642 ಎಂದು ಬದಲಾವಣೆ ಆಗಿರುತ್ತದೆ ಎಂದು ಉತ್ತರ ಕೊಡಿಸಿದ್ದಾನೆ ಎಂದರೆ ಸರಿಯಲ್ಲ. ವಾದಿ ಕೆ ಇ ಬಿ ಇಲಾಖೆಗೆ ಮೇಲೆ ಹೇಳಿದ ಅರ್ಜಿ ಸಲ್ಲಿಸಿದ ನಂತರ ಕೆ ಇ ಬಿ ಇಲಾಖೆಯ ದಾಖಲೆಗಳಲ್ಲಿ ಆಸ್ತಿ ಸಂಖ್ಯೆ ಬಿ373 ಇದು ಆಸ್ತಿ ಸಂಖ್ಯೆ ಬಿ643 ಮತ್ತು ಬಿ642 ಎಂದು

ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಈ ದಾವೆ ದಾಖಲಾದ ನಂತರ ದಾವೆಗೆ ಅನುಕೂಲ ಆಗುವಂತೆ ಆಸ್ತಿ ಸಂಖ್ಯೆ ಬಿ373 ಅನ್ನು ಆಸ್ತಿ ಸಂಖ್ಯೆ ಬಿ643 ಮತ್ತು ಬಿ642 ಎಂದು ಬದಲಾಯಿಸಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಸಂಖ್ಯೆ ಯಾವಾಗಲೂ ಸಹ ಬಿ643 ಎಂದು ಇದ್ದು, ಸದರಿ ಆಸ್ತಿಯು ಯಾವಾಗಲೂ ಸಹ ಪ್ರತಿವಾದಿಯ ಹೆಸರಲ್ಲೇ ಇದೆ ಎಂದರೆ ಸರಿಯಲ್ಲ. ವಾದಿ ಮತ್ತು ನಾನು ದಾವಾ ಆಸ್ತಿಯಲ್ಲಿ ಹಕ್ಕು ಸ್ಥಾಪಿಸಲು ಬಿ642 ಎಂದು ದಾವಾ ಆಸ್ತಿ ದಾಖಲೆಗಳಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪುರಸಭೆ ಹಳಿಯಾಳ ರವರು ಯಾವ ಕಾರಣಕ್ಕೆ ಕೊಟ್ಟರು ಎನ್ನುವುದು ನನಗೆ ಗೊತ್ತು. ಯಾವ ಕಾರಣಕ್ಕೆ ದಾವಾ ಆಸ್ತಿಯನ್ನು ಪುರಸಭೆ ಹಳಿಯಾಳ ರವರು ಕೊಟ್ಟರು ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿಗೆ ಬೇರೆ ಯಾವುದೇ ಉದ್ಯೋಗ ಇಲ್ಲ, ಆ ಕಾರಣದಿಂದ ಅಂಗಡಿ ಹಾಕಿಕೊಳ್ಳಲು ದಾವಾ ಆಸ್ತಿಯನ್ನು ಪುರಸಭೆಯವರು ನೀಡಿದರು ಎನ್ನುತ್ತಾರೆ.

ದಾವಾ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರವನ್ನು ನಾನು ಮತ್ತು ವಾದಿ ಓದಿ ನೋಡಿದ್ದೇವೆ. ಸದರಿ ಖರೀದಿ ಪತ್ರದಲ್ಲಿ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಬಳಹ ವರ್ಷಗಳಿಂದ ಸ್ಕ್ರಾಪ್ ಉದ್ಯೋಗ ಮಾಡುತ್ತಿರುವುದರಿಂದ ಆ ಆಸ್ತಿಯನ್ನು ಪ್ರತಿವಾದಿಗೆ ನೀಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ಇರ್ಷಾದ್ ಖಾನ್ ಬಹದ್ದೂರ ಖಾನ್ ಲೋಹಾನೆ ಎಂಬುವವರ ಪರಿಚಯ ಇರುತ್ತದೆ. ದಾವಾ ಆಸ್ತಿಯಲ್ಲಿ ನಾನು ಮೊದಲು ಗ್ಯಾರೇಜ್ ನಡೆಸುತ್ತಿದ್ದೆ, ನಂತರ ಅದನ್ನು ಇರ್ಷಾದ್ ಖಾನ್ ಬಹದ್ದೂರ ಖಾನ್ ಲೋಹಾನೆ ರವರಿಗೆ ಬಾಡಿಗೆ ಮೂಲಕ ನೀಡಿರುತ್ತೇನೆ. ಸದರಿ ಬಾಡಿಗೆ ಒಪ್ಪಂದ ತೋರಿಸಲು ಈ ದಾವೆಯಲ್ಲಿ ನಾನು ಬಾಡಿಗೆ ಕರಾರು ಪತ್ರಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು 1986 ರಿಂದ ಸುಮಾರು 12 ವರ್ಷಗಳ ವರೆಗೆ ಗ್ಯಾರೇಜ್ ನಡೆಸಿರುತ್ತೇನೆ. ಇರ್ಷಾದ್ ಖಾನ್ ಬಹದ್ದೂರ ಖಾನ್ ಲೋಹಾನೆ ರವರಿಗೆ ಯಾವ ವರ್ಷದಿಂದ ದಾವಾ ಆಸ್ತಿಯನ್ನು ಬಾಡಿಗೆ ನೀಡಿರುವಿರಿ ಎಂದರೆ ಸಾಕ್ಷಿಯು ತಾನು ಗ್ಯಾರೇಜ್ ಅನ್ನು 12 ವರ್ಷಗಳ ವರೆಗೆ ನಡೆಸಿ ಆ ನಂತರ ಬಾಡಿಗೆ ನೀಡಿರುತ್ತೇನೆ ಎನ್ನುತ್ತಾರೆ.

1984 ರಲ್ಲಿ ದಾವಾ ಆಸ್ತಿಯ ಕುರಿತು ಖರೀದಿ ಪತ್ರ ಆಗಿದ್ದು, ಈ ಹಿಂದಿನ ನಿಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯು 1986 ರಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾನೆ ಎಂದು ಹೇಳಿದ್ದು, 1984 ರಿಂದ 1986 ರ ವರೆಗೆ ವಾದಿಯು ದಾವಾ ಆಸ್ತಿಯ ಸ್ವಾಧೀನ ಏಕೆ ಹೊಂದಿರಲಿಲ್ಲ ಎಂದರೆ ಸಾಕ್ಷಿಯು ದಾವಾ ಆಸ್ತಿಯು 1986 ರ ವರೆಗೆ ಪ್ರತಿವಾದಿಯ ಹೆಸರಲ್ಲಿ ಇತ್ತು ಹಾಗೂ 1986 ರಲ್ಲಿ ವಾದಿಯ ಹೆಸರು ದಾವಾ ಆಸ್ತಿಯ ದಾಖಲೆಗಳಿಗೆ ಏರಿದ್ದರಿಂದ 1986 ರಲ್ಲಿ ವಾದಿ ದಾವಾ ಆಸ್ತಿಯ ಸ್ವಾಧೀನ ಹೊಂದಿದನು ಎನ್ನುತ್ತಾರೆ.ವಾದಿಯು 1986 ರಲ್ಲಿ ದಾವಾ ಆಸ್ತಿಯ ಸ್ವಾಧೀನ ಹೊಂದಿದ ನಂತರ ಸುಮಾರು 12 ರಿಂದ 15 ವರ್ಷಗಳ ವರೆಗೆ ನಾವು ದಾವಾ ಆಸ್ತಿಯಲ್ಲಿ ದ್ವಿ ಚಕ್ರ ವಾಹನಗಳ ಗ್ಯಾರೇಜ್ ನಡೆಸಿರುತ್ತೇವೆ. ಸದರಿ ಗ್ಯಾರೇಜ್ ಅನ್ನು ನನ್ನ ತಂದೆಯ ಹೆಸರಲ್ಲಿ

ನಾನು ನಡೆಸುತ್ತಿದ್ದೆ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಯ ಭಾಗದ ಆಸ್ತಿಯ ನಡುವೆ ಸುಮಾರು 8 ರಿಂದ 12 ಅಡಿ ಎತ್ತರದ ಗೋಡೆ ಇತ್ತು. ನಾವು ಗ್ಯಾರೇಜ್ ನಡೆಸುವ ಸಂದರ್ಭದಲ್ಲಿ ಪ್ರತಿವಾದಿಯು ತನ್ನ ಭಾಗದ ದಾವಾ ಆಸ್ತಿಯ ಭಾಗವನ್ನು ಬೇರೆಯವರಿಗೆ ಬಾಡಿಗೆ ನೀಡಿದ್ದನು. ಆ ರೀತಿ ಪ್ರತಿವಾದಿ ದಾವಾ ಆಸ್ತಿಯ ಅರ್ಧ ಭಾಗವನ್ನು ಬಾಡಿಗೆ ನೀಡಿದ್ದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಪೂರ್ಣ ಭಾಗವನ್ನು ಪ್ರತಿವಾದಿ ಸ್ವಾಧೀನ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಗ್ಯಾರೇಜ್ ನಡೆಸುತ್ತಿದ್ದೇವು ಹಾಗೂ ನಂತರ ಅದನ್ನು ಬಾಡಿಗೆ ಕೊಟ್ಟಿರುತ್ತೇವೆ ಹಾಗೂ ಪ್ರತಿವಾದಿಯೂ ಸಹ ತನ್ನ ಭಾಗದ ಆಸ್ತಿಯನ್ನು ಬಾಡಿಗೆ ಕೊಟ್ಟಿದ್ದ ಎಂಬ ವಿಚಾರವನ್ನು ವಾದಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಯಾವುದೇ ಸರಿಯಾದ ಉತ್ತರ ನೀಡಲಿಲ್ಲ.

ಇರ್ಷಾದ್ ಖಾನ್ ಬಹದ್ದೂರ ಖಾನ್ ಲೋಹಾನೆ ರವರು ಬಾಡಿಗೆ ನಾತೆಯಿಂದ 2020-2021 ರ ವರೆಗೆ ಇದ್ದರು. ಈಗ ಸಧ್ಯಕ್ಕೆ ದಾವಾ ಆಸ್ತಿಯ ಸ್ವಾಧೀನವನ್ನು ಪ್ರತಿವಾದಿ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಈಗ ಸಧ್ಯಕ್ಕೆ ಪ್ರತಿವಾದಿಯು ದಾವಾ ಆಸ್ತಿಯ ಪೈಕಿ 17 ಅಡಿ ಅಗಲ ಹಾಗೂ ಉದ್ದ ಸುಮಾರು 30 ಅಡಿ ಜಾಗೆಯ ಸ್ವಾಧೀನ ಹೊಂದಿರುತ್ತಾನೆ. ಆ ರೀತಿ ನಾನು ಹೇಳುವುದು ಕಾಲ್ಪನಿಕ ಮತ್ತು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗೆ ಪುರಸಭೆ ಹಳಿಯಾಳ ರವರು 16 ಅಡಿ ಇಂಟು 24 ಅಡಿ ಜಾಗವನ್ನು ನೀಡಿದ್ದು, ಸದರಿ ಸಂಪೂರ್ಣ ಜಾಗದ ಸ್ವಾಧೀನವನ್ನು ಪ್ರತಿವಾದಿಯೇ ಹೊಂದಿರುತ್ತಾನೆ ಎಂದರೆ ಸಾಕ್ಷಿಯು ಪುರಸಭೆಯವರು 222 ಚದರ ಅಡಿ ಜಾಗವನ್ನು ನೀಡಿದ್ದಾರೆ ಎನ್ನುತ್ತಾರೆ. ನಿಪಿ 20 ರಿಂದ 29 ರ ದಾಖಲೆಗಳು ದಾವಾ ಆಸ್ತಿ ಅಂದರೆ ಪುರಸಭೆ ಆಸ್ತಿ ಸಂಖ್ಯೆ ಬಿ643 ಕ್ಕೆ ಸಂಬಂಧ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 20 ರಿಂದ 29 ರ ದಾಖಲೆಗಳಲ್ಲಿ ಆಸ್ತಿ ಸಂಖ್ಯೆ ನಂಬರ ಬಿ373 ಎಂದು ನಮೂದಿಸಲಾಗಿದೆ ಎಂದರೆ ಸರಿ. ಕೆ ಇ ಬಿ ಇಲಾಖೆಯವರಿಗೆ ನಮ್ಮ ತಂದೆ ರೂ.100 ನ ಬಾಂಡ್ (ನಷ್ಟ ಭರ್ತಿ ಮುಚ್ಚಳಿಕೆ ಪತ್ರ) ಬರೆದುಕೊಟ್ಟಿದ್ದರಿಂದ ಅವರು ಆಸ್ತಿ ಸಂಖ್ಯೆ ಬಿ373 ಅನ್ನು ಆಸ್ತಿ ಸಂಖ್ಯೆ ಬಿ643 ಮತ್ತು 642 ಎಂದು ಬದಲಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 12 ಅನ್ನು ವಾದಿಯು ಕೆ ಇ ಬಿ ದವರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರ ಆಗಿರುತ್ತದೆ ಎಂದರೆ ಸರಿ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಹಾಗೂ ತದನಂತರ ವಾದಿ ದಾವಾ ಆಸ್ತಿಯಲ್ಲಿ ಕಬ್ಜೆ ಹೊಂದಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿಯ ಅಂಗಡಿ ಬಿದ್ದಿದ್ದರಿಂದ ಸ್ವಾಧೀನದಲ್ಲಿ ಇಲ್ಲ ಎನ್ನುತ್ತಾರೆ. ವಾದಿ ದಾವಾ ಆಸ್ತಿಯಲ್ಲಿ ಇಲ್ಲದೇ ಇರುವುದರಿಂದ ದಾವಾ ಆಸ್ತಿಯಲ್ಲಿ ಪಾಲು ಮತ್ತು ಕಬ್ಜೆ ಕೋರಿ ಈ ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲಿ ಅಂಗಡಿ ಬಿದ್ದಿರುವುದರಿಂದ ಹಿಸ್ಸೆ ಕೋರಿ ದಾವೆ ಸಲ್ಲಿಸಲಾಗಿದೆ ಎನ್ನುತ್ತಾರೆ.

ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ನೋಡಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿ ಈ ದಾವೆಯನ್ನು ಹೊರತುಪಡಿಸಿ ವಾದಿ ಅಥವಾ ನಾನು ಬೇರೆ ಯಾವುದೇ ದಾವೆ ಸಲ್ಲಿಸಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.